ಬಾಲಿವುಡ್

# ಕೊನೆಗೂ ಬಾಹ್ಯಾಕಾಶಕ್ಕೆ ಹೋಗಿಬಂದ ಕ್ಯಾ. ಕಿರ್ಕ್!

■ ಪ್ರವೀಣ ಕುಲಕರ್ಣಿ

ಇಂಗ್ಲಿಷ್ ಕಾದಂಬರಿಗಳನ್ನು ಓದುವ ಅಭಿರುಚಿ ಹೊಂದಿದವರಿಗೆ, ಅದರೊಟ್ಟಿಗೆ 40–50 ವರ್ಷಗಳ ಹಿಂದಿನ ಅಮೆರಿಕದ ಟಿ.ವಿ. ಧಾರಾವಾಹಿ ವೀಕ್ಷಣೆಯ ಹುಚ್ಚು ಬೆಳೆಸಿಕೊಂಡವರಿಗೆ ಕ್ಯಾಪ್ಟನ್ ಜೇಮ್ಸ್ ಟಿ. ಕಿರ್ಕ್ ಗೊತ್ತಿರಲಿಕ್ಕೇ ಬೇಕು. ಈತನೊಬ್ಬ ಯಾವುದೋ ಕಿರಿಕ್ ಪಾರ್ಟಿಯ ಪ್ರತಿನಿಧಿ ಎಂದು ನೀವು ಹಗುರವಾಗಿ ಭಾವಿಸುವ ಹಾಗಿಲ್ಲ. ಏಕೆಂದರೆ, ಈತ ತುಂಬಾ ವಿಶೇಷವಾದ ಮನುಷ್ಯ. ಈತ ಜನಿಸಿದ್ದೇ 2233ರ ಮಾರ್ಚ್ 22ರಂದು. ಬಾಳಿ ಬದುಕಿದ್ದು, ಕಥೆ ಹೇಳುವುದು ಮಾತ್ರ 20 ಮತ್ತು 21ನೇ ಶತಮಾನದಲ್ಲಿ!

ಕಿರ್ಕ್‌ನ ಸದ್ಯದ ವಿಷಯಕ್ಕೆ ಬರುವ ಮುನ್ನ ಈತನ ಇನ್ನೊಂದೆರಡು ವಿವರಗಳನ್ನು ನೋಡಿಬಿಡೋಣ. ನಾವು–ನೀವೆಲ್ಲ ಎಂದಿಗೂ ಕಂಡಿರದ ಚಿತ್ರ–ವಿಚಿತ್ರ ಲೋಕವನ್ನು ಈತ ನೋಡಿ ಬಂದವನು. ಮನೆಯಿಂದ ಕೆಲಸದ ಸ್ಥಳಕ್ಕೆ ಓಡಾಡಲು ನಾವೊಂದು ಬೈಕ್ ಇಟ್ಟುಕೊಂಡಿರುತ್ತೇವಲ್ಲ? ಹಾಗೆ ಈತ ಮಾನವ ಕಾಲಿಡದ ಲೋಕಕ್ಕೆ ಹೋಗಿಬರಲು 'ಯುಎಸ್‌ಎಸ್ ಎಂಟರ್‌ಪ್ರೈಸ್' ಎಂಬ ಗಗನನೌಕೆಯನ್ನು ಇಟ್ಟುಕೊಂಡವನು. ಇನ್ನೂ ಈತನ ಕುರಿತು ನಿಮ್ಮಲ್ಲಿ ಹೀಗೆ ಹೆಚ್ಚಿನ ಕುತೂಹಲವನ್ನು ಕೆರಳಿಸುತ್ತಾ ಹೋಗುವುದಿಲ್ಲ. ಅಮೆರಿಕದ ವಿಜ್ಞಾನ ಕಥಾಲೋಕದ ಮೀಡಿಯಾ ಫ್ರಾಂಚೈಸಿ ಎನಿಸಿದ ಸ್ಟಾರ್ ಟ್ರೆಕ್‌ನ 'ಕಾಲ್ಪನಿಕ ಪಾತ್ರ' ಈತ.

'ಯುಎಸ್‌ಎಸ್ ಎಂಟರ್‌ಪ್ರೈಸ್' ಯಾನದ ಮೂಲಕ ನವನಾಗರಿಕತೆಗಳನ್ನು, ಹೊಸ ಜಗತ್ತುಗಳನ್ನು 'ಪತ್ತೆ ಹಚ್ಚಿದವ' ಈ ಕಿರ್ಕ್. ಕಿರ್ಕ್‌ನ ಸಾಹಸದ ಧಾರಾವಾಹಿ ಸರಣಿಗಳು ಜಗತ್ತಿನ ಟಿ.ವಿ. ವೀಕ್ಷಕರನ್ನು ಸೂಜಿಗಲ್ಲಿನಂತೆ ಸೆಳೆದಿದ್ದವು. ಈತನ ಅನ್ಯಗ್ರಹದ 'ಯಾತ್ರೆ'ಗಳು ರೋಮಾಂಚನಕಾರಿ ಆಗಿದ್ದವು. ಯೂಟ್ಯೂಬ್‌ನಲ್ಲಿ ಈಗಲೂ ಹುಡುಕಿದರೆ ಅಂತಹ ಸಾಹಸಯಾನದ ಸರಣಿಗಳು ಸುರುಳಿ, ಸುರುಳಿಯಾಗಿ ಬಿಚ್ಚಿಕೊಳ್ಳುತ್ತವೆ. ಅದರಲ್ಲೂ 'ದಿ ಮ್ಯಾನ್ ಟ್ರ್ಯಾಪ್' ಬಲು ಪ್ರಸಿದ್ಧ.

ಕಿರ್ಕ್‌ನ ಈ ಪಾಟಿ ಪುರಾಣ ಈಗೇಕೆ ಎನ್ನುವ ಪ್ರಶ್ನೆ ನಿಮ್ಮ ತಲೆ ತಿನ್ನುತ್ತಿರಬಹುದು. ಕಿರ್ಕ್‌ನ ಈ ಪಾತ್ರಕ್ಕೆ ಜೀವ ತುಂಬಿದವನು ಕೆನಡಾದ ನಟ, ನಿರ್ಮಾಪಕ ವಿಲಿಯಂ ಶೆಟ್ನರ್. 'ಮನುಷ್ಯ ಈ ಹಿಂದೆ ಎಂದಿಗೂ ಹೋಗಿರದ ಜಾಗ'ವನ್ನು ಕಿರ್ಕ್ ಪಾತ್ರದ ಮೂಲಕ ಹುಡುಕಿಕೊಂಡು ಹೋಗುತ್ತಿದ್ದ ಉತ್ಸಾಹಿ ತರುಣ ವಿಲಿಯಂ ಈಗ ತಾತ. ಈ ಅಜ್ಜನಿಗೆ ಬರೋಬ್ಬರಿ 90ರ ಹರೆಯ. ಕಳೆದ ವಾರ 'ಬ್ಲೂ ಒರಿಜಿನ್' ಕಂಪನಿಯ ಮಾಲೀಕ ಜೆಫ್ ಬೆಜೋಸ್ ಜತೆ 'ನ್ಯೂ ಶೆಪರ್ಡ್' ಬಾನನೌಕೆಯಲ್ಲಿ ಈ ಅಜ್ಜ ಬಾಹ್ಯಾಕಾಶ ಪ್ರವಾಸ ಮಾಡಿಬಂದ. ಬಾಹ್ಯಾಕಾಶ ಪ್ರವಾಸ ಮಾಡಿದ ಅತ್ಯಂತ ಹಿರಿಯ ಎಂಬ ದಾಖಲೆಯನ್ನೂ ತನ್ನ ಹೆಸರಿಗೆ ಬರೆಸಿಕೊಂಡ. ಈವರೆಗೆ ವ್ಯಾಲಿ ಫಂಕ್ (82) ಎಂಬ ಅಜ್ಜನ ಹೆಸರಿನಲ್ಲಿ ಈ ದಾಖಲೆ ಇತ್ತು.

ಕಿರ್ಕ್ ಪಾತ್ರದ ಮೂಲಕ ಕಾಲ್ಪನಿಕವಾಗಿ ಅನ್ಯಗ್ರಹಗಳನ್ನು ಸುತ್ತುತ್ತಿದ್ದ ವಿಲಿಯಂ, ನಿಜವಾಗಿಯೂ ಬಾನನೌಕೆಯಲ್ಲಿ ಬಾಹ್ಯಾಕಾಶ ಪ್ರವಾಸ ಮಾಡಿಬಂದ. ಪ್ರವಾಸ ಮುಗಿಸಿ ಬಾನನೌಕೆ ಭೂಸ್ಪರ್ಶ ಮಾಡಿದ ಮೇಲೆ ಹೊರಬಂದ ವಿಲಿಯಂ ಅಜ್ಜ ಹರ್ಷದಲ್ಲಿ ತೇಲಾಡುತ್ತಿದ್ದ. 'ಬೆಜೋಸ್, ಇಂದು ನೀನು ನನಗೆ ಕೊಟ್ಟಿದ್ದು ಅತ್ಯದ್ಭುತವಾದ ಅನುಭವವನ್ನು' ಎಂದು ಆತ ಹೇಳುವಾಗ ಆತನ ಕಣ್ಣುಗಳಲ್ಲಿ ಹರ್ಷಧಾರೆ.

ಬಾಹ್ಯಾಕಾಶ ಪ್ರವಾಸದಲ್ಲಿ ದುಡ್ಡು ಒಂದೇ ಮುಖ್ಯವಲ್ಲ. ಸುರಕ್ಷಿತವಾದ ರಾಕೆಟ್ ಉಡಾವಣೆ ಕೂಡ ಅತ್ಯಂತ ಸವಾಲಿನದು. ಹೊರಜಗತ್ತಿನಲ್ಲಿ ಉಂಟಾಗುವ ದೈಹಿಕ ಮತ್ತು ಮಾನಸಿಕ ಏರುಪೇರು, ವಿಕಿರಣದ ಭಯ ಇವೆಲ್ಲವನ್ನು ಎದುರಿಸಲು ಪ್ರವಾಸಿಗರು ತಯಾರಿರಬೇಕು. ವಿಲಿಯಂ ಅಜ್ಜ ಅಂತಹ ಸವಾಲುಗಳನ್ನೆಲ್ಲ ಮೆಟ್ಟಿ ಬಾಹ್ಯಾಕಾಶದ ಬೌಂಡರಿ ತಲುಪಿ ಬಂದ. 'ನಾವೂ ಒಂದು ಕೈ ನೋಡಬೇಕು' ಎಂದು ಇತರರಲ್ಲೂ ಹುಮ್ಮಸ್ಸು ತುಂಬಿದ.

ಅತ್ಯಂತ ಸ್ಫುರದ್ರೂಪಿಯಾಗಿದ್ದ ವಿಲಿಯಂ, ನಟನೆಗೆ ನಿಂತರೆ ಪರಕಾಯ ಪ್ರವೇಶ ಮಾಡುತ್ತಿದ್ದ ಎಂಬ ಪ್ರತೀತಿ. ಆದ್ದರಿಂದಲೇ ವಿಲಿಯಂ ಎನ್ನುವ ಆತನ ಮೂಲಹೆಸರು ಮಾಯವಾಗಿ ಇಡೀ ಜಗತ್ತು 'ಕ್ಯಾಪ್ಟನ್ ಕಿರ್ಕ್' ಎಂದೇ ಗುರುತಿಸುತ್ತಿರುವುದು. ನಟನೆಯಲ್ಲಿ ಮಾತ್ರವಲ್ಲ, ಕಥೆ ಹೇಳುವುದರಲ್ಲೂ ಈತ ನಿಸ್ಸೀಮ. ಕಿರ್ಕ್‌ನ ಪಾತ್ರದ ಅನುಭವವನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದೇ ಬಂತು. ಆ ಹೊತ್ತಿಗೆಗಳೆಲ್ಲ ಮಸಾಲೆ ದೋಸೆಯಂತೆ ಖರ್ಚಾಗಿ ಹೋದವು. ಸ್ಟಾರ್ ಟ್ರೆಕ್‌ನ ಹಲವು ಸರಣಿಗಳಿಗೆ ಈ ಅಜ್ಜನೇ ಸಹ ಲೇಖಕ. ಒಂದು ಹಂತದಲ್ಲಿ ಸ್ಟಾರ್ ಟ್ರೆಕ್‌ನ ಸರಣಿಗಳೆಲ್ಲ ಆ್ಯನಿಮೇಟೆಡ್ ಸ್ವರೂಪ ತಾಳಿದವು. ಅಲ್ಲಿಯೂ ವಿಲಿಯಂ ಅಜ್ಜನ ಜರೂರತ್ತು ಬಿತ್ತು. ಈ ಅಜ್ಜನ ಹಿನ್ನೆಲೆ ಧ್ವನಿ ಇಲ್ಲದಿದ್ದರೆ ದೃಶ್ಯದಲ್ಲಿ ಕಾಣುತ್ತಿರುವ 'ವ್ಯಕ್ತಿ'ಯನ್ನು ಕಿರ್ಕ್ ಎಂದು ಹೇಗೆ ಅಂದುಕೊಳ್ಳುವುದು?



1960–70ರ ದಶಕಗಳಲ್ಲಿ ಅನ್ಯಗ್ರಹಗಳ ಕಲ್ಪನಾ ಲೋಕದಲ್ಲಿ ವೀಕ್ಷಕರನ್ನು ವಿಹರಿಸಲು ಕರೆದೊಯ್ಯುತ್ತಿದ್ದ ಈ ಕ್ಯಾಪ್ಟನ್, ಕಲ್ಪನಾ ಲೋಕದಿಂದ ಹೊರಬಂದು ಬಾಹ್ಯಾಕಾಶ ಪ್ರಯಾಣದ ವಾಸ್ತವಿಕ ಅನುಭವವನ್ನು ಪಡೆದಿರುವುದು ಕಿರ್ಕ್ ಅಭಿಮಾನಿಗಳಿಗೆಲ್ಲ ಖುಷಿ ತಂದಿದೆ. 'ಬ್ಲೂ ಒರಿಜಿನ್' ಕಂಪನಿ ಇನ್ನೇನು ಬಾಹ್ಯಾಕಾಶದ ಯಾನಕ್ಕೆ ಟಿಕೆಟ್ ಮಾರಾಟ ಶುರು ಮಾಡಲಿದೆ. ವಿಲಿಯಂ ಅಜ್ಜನಂತೆ ನೀವೂ ಈ ವಿಶಿಷ್ಟಯಾನದ ಅನುಭವ ಪಡೆಯಬೇಕೆಂದರೆ ಕೋಟ್ಯಂತರ ರೂಪಾಯಿ ಕೊಟ್ಟು ಟಿಕೆಟ್ ಖರೀದಿಸಲು ಸಿದ್ಧರಿರಬೇಕಷ್ಟೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65